## ಕರ್ನಾಟಕ ಸರ್ಕಾರದ ನಡವಳಿಗಳು.

ವಿಷಯ: ಶ್ರೀಮತಿ ಜಯಮ್ಮ ಅಧ್ಯಕ್ಷರು, ಉದ್ಬೂರು ಗ್ರಾಮ ಪಂಚಾಯತಿ, ಮೈಸೂರು ತಾಲ್ಲೂಕು, ಮೈಸೂರು ಜಿಲ್ಲೆ ಇವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 43(ಎ) ರನ್ವಯ ಕ್ರಮ ಜರುಗಿಸುವ ಬಗ್ಗೆ.

ಓದಲಾಗಿದೆ:

1) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತಿ, ಮೈಸೂರು ಇವರ ಪತ್ರ ಸಂಖ್ಯೆ:ಡಿಇವಿ3/20/2017-18/17552 ದಿನಾಂಕ 19.06.2017.
2) ಇದೇ ಸಮಸಂಖ್ಯೆಯ ಕಾರಣ ಕೇಳುವ ನೋಟಿಸ್, ದಿನಾಂಕ 05.08.2017.
3) ಶ್ರೀಮತಿ ಜಯಮ್ಮ, ಅಧ್ಯಕ್ಷರು ಉದ್ಬೂರು ಗ್ರಾಮ ಪಂಚಾಯಿತಿ, ಮೈಸೂರು ತಾಲ್ಲೂಕು ಮತ್ತು ಜಿಲ್ಲೆ ಇವರ ಲಿಖಿತ ಹೇಳಿಕೆ, ದಿನಾಂಕ 18.08.2017.
4) ಸರ್ಕಾರದ ಸಮಸಂಖ್ಯೆಯ ವಿಚಾರಣಾ ನೋಟೀಸ್, ದಿನಾಂಕ 30.11.2017.
5) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಮೈಸೂರು ಇವರ ಪತ್ರ ಸಂಖ್ಯೆ:ಡಿಇವಿ3:20/2017-18/17552 ದಿನಾಂಕ 18.12.2017.

**ಪ್ರಸ್ತಾವನೆ:**

ಮೇಲೆ ಓದಲಾದ (1) ರಲ್ಲಿ ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಉದ್ಬೂರು ಗ್ರಾಮ ಪಂಚಾಯತಿಯಲ್ಲಿ ಗ್ರಾಮ ಪಂಚಾಯತಿ ಅದ್ಯಕ್ಷರಾದ ಶ್ರೀಮತಿ ಜಯಮ್ಮ ರವರು ಪ್ರಭಾರ ಪಂಚಾಯತ ಅಭಿವೃದ್ಧಿ ಅಧಿಕಾರಿಯಾದ ಶ್ರೀ ನಾಗರಾಜ್ ರವರು ದಿ:22.12.2016 ರಂದು ಅಮಾನತ್ತುಗೊಂಡ ನಂತರ ದಿ:23.12.2016 ರಂದು ಸಿ.ಕೆ.ಜಿ.ಬಿ. ಬ್ಯಾಂಕ್‌ನಿಂದ ಹೊಸ ಚೆಕ್ ಪುಸ್ತಕ ಪಡೆದು 1,88,939/- (ಒಂದು ಲಕ್ಷ ಎಂಬಂತೆಂಟು ಸಾವಿರದ ಒಂಬತ್ತು ನೂರ ಮೂವತ್ತೊಂಬತ್ತು) ರೂಗಳನ್ನು ವೆಚ್ಚ ಮಾಡಿರುವುದಾಗಿ ಮತ್ತು ಸದರಿ ಮೊತ್ತದಲ್ಲಿ 1,07,623/- ರೂಗಳಿಗೆ ಯಾವುದೇ ವೋಚರ್‌ಗಳು ಇರುವುದಿಲ್ಲ ಆದ್ದರಿಂದ ಶ್ರೀಮತಿ ಜಯಮ್ಮ, ಅಧ್ಯಕ್ಷರು ಉದ್ಬೂರು ಗ್ರಾಮ ಪಂಚಾಯಿತಿ, ಮೈಸೂರು ತಾಲ್ಲೂಕು ಮತ್ತು ಜಿಲ್ಲೆ ಇವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂ.ರಾಜ್ ಅಧಿನಿಯಮದ 1993 ರ ಪ್ರಕರಣ 43(ಎ) ರಂತೆ ಕ್ರಮ ಕೈಗೊಳ್ಳುವಂತೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 48(4) ಮತ್ತು 43(ಎ) ರನ್ವಯ ಗ್ರಾಮ ಪಂಚಾಯತಿ ಅಧ್ಯಕ್ಷ ಹಾಗೂ ಸದಸ್ಯ ಸ್ಥಾನದಿಂದ ಏಕೆ ವಜಾ ಮಾಡಬಾರದು ಎಂಬುದರ ಬಗ್ಗೆ 15 ದಿನಗಳೊಳಗಾಗಿ ವಿವರಣೆ ನೀಡುವಂತೆ ಮೇಲೆ ಓದಲಾದ ಕ್ರಮ ಸಂಖ್ಯೆ: (2) ರಲ್ಲಿ ಶ್ರೀಮತಿ ಜಯಮ್ಮ, ಅಧ್ಯಕ್ಷರು ಉದ್ಬೂರು ಗ್ರಾಮ ಪಂಚಾಯಿತಿ, ಮೈಸೂರು ತಾಲ್ಲೂಕು ಮತ್ತು ಜಿಲ್ಲೆ ರವರಿಗೆ ಕಾರಣ ಕೇಳುವ ನೋಟೀಸನ್ನು ಜಾರಿಗೊಳಿಸಲಾಗಿತ್ತು.

ಮೇಲೆ ಓದಲಾದ (3)ರಲ್ಲಿ ಶ್ರೀಮತಿ ಜಯಮ್ಮ, ಅಧ್ಯಕ್ಷರು ಉದ್ಬೂರು ಗ್ರಾಮ ಪಂಚಾಯಿತಿ, ಮೈಸೂರು ತಾಲ್ಲೂಕು ಮತ್ತು ಜಿಲ್ಲೆ ಇವರು ಸರ್ಕಾರದಿಂದ ನೀಡಲಾದ ಕಾರಣ ಕೇಳಿ ನೋಟೀಸಿಗೆ ಕೆಳಗಿನಂತೆ ಆಕ್ಷೇಪಣೆಗಳನ್ನು ಸಲ್ಲಿಸಿರುತ್ತಾರೆ.

"ನನ್ನ ವಿರುದ್ಧ ತನಿಖೆ ಮಾಡಿ ಸಲ್ಲಿಸಿರುವ ವರದಿಯಲ್ಲಿ ಹಲವಾರು ಸುಳ್ಳು ಮಾಹಿತಿಗಳಿದ್ದು ನಾನೊಬ್ಬ ಅವಿಧ್ಯಾವಂತ ಮಹಿಳೆಯಾಗಿದ್ದು ಯಾವುದೇ ಅಪರಾದವನ್ನು ನನ್ನ ಸ್ವ-ಇಚ್ಛೆಯಿಂದ ನೇರವಾಗಿ ಮಾಡಿರುವುದಿಲ್ಲ. 1,07,623/- ರೂಗಳಿಗೆ ಯಾವುದೇ ವೋಚರ್‌ಗಳಿರುವುದಿಲ್ಲ ಎಂದು ಆರೋಪಿಸಿರುತ್ತಾರೆ. ಆದರೆ ಈ ಸಂಬಂಧ ಗ್ರಾಮ ಪಂಚಾಯಿತಿಯಲ್ಲಿ ದಾಖಲೆಗಳಿರುತ್ತವೆ. ಪಿಡಿಓ ನಾಗರಾಜುರವರು ಅಮಾನತ್ತುಗೊಂಡ ನಂತರ ಚೆಕ್ ಪುಸ್ತಕ ಪಡೆದು ಅಮಾನತ್ತಿನ ಹಿಂದಿನ ದಿನಾಂಕಕ್ಕೆ ಖರ್ಚುಗಳ ಪಾವತಿ ಮಾಡಿರುತ್ತಾರೆಂದು ನನ್ನ ವಿರುದ್ಧ ಆರೋಪ ಮಾಡಿರುತ್ತಾರೆ. ಆದರೆ ಚೆಕ್ ಪುಸ್ತಕ ಪಡೆಯುವುದು ಬರೆಯುವುದು ಆಡಳಿತಾತ್ಮಕವಾಗಿ, ಕಾನೂನಾತ್ಮಕವಾಗಿ ದಾಖಲೆಗಳನ್ನು ನಿರ್ವಹಿಸುವುದು ಪಿಡಿಓ ರವರ ಕರ್ತವ್ಯವಾಗಿರುತ್ತದೆ. ಚೆಕ್ ಪುಸ್ತಕ ಪಡೆಯಲು ಪಿಡಿಓ ರವರು ತಮ್ಮ ಒಂದೇ ಸಹಿಯನ್ನು ಹಾಕಿ ಅಧ್ಯಕ್ಷರು ಸಹಿಮಾಡುವ ಸ್ಥಳದಲ್ಲಿ ಬಿಲ್ ಕಲೆಕ್ಟರ್ ಚಿಕ್ಕಮರಿಸಿದ್ದ ರವರಿಂದ ಸಹಿ ಮಾಡಿಸಿ ಬ್ಯಾಂಕ್‌ನಿಂದ ಚೆಕ್ ಪುಸ್ತಕ ಪಡೆದಿದ್ದು ಈ ಸಂಬಂಧ ನನ್ನಲ್ಲಿ ದಾಖಲೆಗಳಿರುತ್ತವೆ. ಇದನ್ನು ನಾನು ವಿಚಾರಣೆಯ ಸಮಯದಲ್ಲಿ ಹಾಜರುಪಡಿಸುತ್ತೇನೆ.

ಉದ್ಬೂರು ಗ್ರಾಮ ಪಂಚಾಯತಿ ಪಿಡಿಓ ನಾಗರಾಜ್ ರವರ ತಪ್ಪಿನಿಂದಾಗಿ ನನಗೆ ಈ ಸಮಸ್ಯೆ ಬಂದಿದೆ, ಹಾಗೂ ಗ್ರಾಮ ಪಂಚಾಯಿತಿ ಬಿಲ್ ಕಲೆಕ್ಟರ್ ಆದ ಚಿಕ್ಕಮರಿಸಿದ್ದ ರವರ ಷಡ್ಯಂತ್ರದಿಂದಾಗಿ ಈ ಸಮಸ್ಯೆಯನ್ನು ನನ್ನ ವಿರುದ್ಧ ಸೃಷ್ಟಿ ಮಾಡಿರುತ್ತಾರೆ. ನಾನೊಬ್ಬ ಅವಿದ್ಯಾವಂತಳಾಗಿದ್ದು, ಪಿಡಿಓ ನಾಗರಾಜು ಅಮಾನತ್ತು ಆಗಿರುವ ವಿಚಾರ ನನಗೆ ತಿಳಿದಿರಲಿಲ್ಲ. ಪಿಡಿಓ ಹೇಳಿದ ಕಡೆ ನಾನು ಸಹಿ ಮಾಡಿರುತ್ತೇನೆ. ಅಷ್ಟೇ ಹಾಗೂ ನಾವು ಪಾವತಿಸಿರುವ ಬಿಲ್‌ಗಳು ಸತ್ಯವಾಗಿರುತ್ತವೆ. ಹಾಗೂ ಕೆಲವು ಚೆಕ್‌ಗಳನ್ನು ಬಿಲ್ ಕಲೆಕ್ಟರ್ ಚಿಕ್ಕಮರಿಸಿದ್ದ ತನ್ನ ಮಾವನ ಹೆಸರಿಗೆ ಡ್ರಾ ಮಾಡಿಸಿಕೊಂಡಿರುತ್ತಾನೆ. ನನಗೆ ಯಾವುದೇ ಅಧಿಕಾರದ ಆಸೆಯಿಲ್ಲ ನಾನೊಬ್ಬ ನಿರಪರಾಧಿಯಾಗಿರುತ್ತೇನೆ. ತಾವು ಈ ಬಗ್ಗೆ ಪರಿಶೀಲಿಸಿ, ಬೇಕಾದರೆ ತಾವು ನನ್ನ ಗ್ರಾಮ ಪಂಚಾಯತಿ ಅಧ್ಯಕ್ಷೆಯ ಹುದ್ದೆಯನ್ನು ಮತ್ತು ಆಡಳಿತಾತ್ಮಕ ಅಧಿಕಾರವನ್ನು (ಡ್ರಾಯಿಂಗ್ ಪವರ್) ಅಮಾನತ್ತಿನಲ್ಲಿಟ್ಟು ನನ್ನ ವಿರುದ್ಧ ಮಾಡಿರುವ ಆರೋಪಗಳ ಸತ್ಯಾಸತ್ಯತೆಯನ್ನು ಪರಿಶೀಲಿಸಿ ಅವಿದ್ಯಾವಂತಳಾದ ನನಗೆ ನ್ಯಾಯ ದೊರಕಿಸಿಕೊಡಬೇಕೆಂದು ವಿನಂತಿಸಿರುತ್ತಾರೆ".

ಮೇಲೆ ಓದಲಾದ (4) ರನ್ವಯ ಶ್ರೀಮತಿ ಜಯಮ್ಮ, ಅಧ್ಯಕ್ಷರು ಉದ್ಬೂರು ಗ್ರಾಮ ಪಂಚಾಯಿತಿ, ಮೈಸೂರು ತಾಲ್ಲೂಕು ಮತ್ತು ಜಿಲ್ಲೆ ಇವರನ್ನು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿ(ಪಂ.ರಾಜ್) ರವರ ನ್ಯಾಯಾಲಯದಲ್ಲಿ ದಿನಾಂಕ 11.12.2017 ರಂದು ಜರುಗಿದ ವಿಚಾರಣೆಯಲ್ಲಿ, ಅಧ್ಯಕ್ಷರು, ಉದ್ಬೂರು ಗ್ರಾಮ ಪಂಚಾಯತಿ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಉದ್ಬೂರು ಗ್ರಾಮ ಪಂಚಾಯತಿ, ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಮೈಸೂರು, ಹಾಗೂ ಉಪಕಾರ್ಯದರ್ಶಿ ಅಭಿವೃದ್ಧಿ ಜಿಲ್ಲಾ ಪಂಚಾಯತಿ ಮೈಸೂರು ರವರು ಹಾಜರಿದ್ದರು. ಅಧ್ಯಕ್ಷರು ದಾಖಲಾತಿಗಳೊಂದಿಗೆ ತಮ್ಮ ಲಿಖಿತ ಹೇಳಿಕೆಯನ್ನು ಸಲ್ಲಿಸಿರುತ್ತಾರೆ.

ಮೇಲೆ ಓದಲಾದ (5) ರಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತಿ, ಮೈಸೂರು ರವರ ವರದಿಯಲ್ಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಉದ್ಬೂರು ಗ್ರಾಮ ಪಂಚಾಯತಿ ರವರು ರೂ.1,07,623/-ಗಳ ವೆಚ್ಚಗಳಿಗೆ ಸಂಬಂಧಿಸಿದಂತೆ ಎಲ್ಲಾ ಓಚರ್‌ಗಳನ್ನು ಹಾಜರುಪಡಿಸಿರುತ್ತಾರೆಂದು, ಈ ವೆಚ್ಚಗಳಿಗೆ ಸಂಬಂಧಿಸಿದಂತೆ ಗ್ರಾಮ ಪಂಚಾಯತಿಯ ಸಾಮಾನ್ಯ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದಿರುವುದಿಲ್ಲವೆಂದು ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಮೈಸೂರು ರವರು ವರದಿ ಸಲ್ಲಿಸಿರುತ್ತಾರೆಂದು ತಿಳಿಸಿರುತ್ತಾರೆ. ಪಂಚಾಯತಿ ಅಭಿವೃದ್ಧಿ ಅಧಿಕಾರಿ ಶ್ರೀ ನಾಗರಾಜು ರವರು ಅಮಾನತ್ತುಗೊಂಡು ದಿನಾಂಕ:22-12-2016 ರಂದು ಕರ್ತವ್ಯದಿಂದ ಬಿಡುಗಡೆಗೊಂಡ ನಂತರ ಕಾವೇರಿ ಗ್ರಾಮೀಣ ಬ್ಯಾಂಕ್ ಉದ್ಬೂರು ಶಾಖೆಯಿಂದ ದಿನಾಂಕ:23-12-2016 ರಂದು(ಚೆಕ್ ಸಂಖ್ಯೆ 540526 ರಿಂದ 540550 ರವರೆಗೆ) ಚೆಕ ಪುಸ್ತಕವನ್ನು ಪಡೆದು ಸದರಿ ಚೆಕ್‌ನಲ್ಲಿ ದಿನಾಂಕ:20-12-2016 ಎಂದು ನಮೂದಿಸಿ 540526 ರಿಂದ 540535 ರವರೆಗೆ ಒಟ್ಟು 9 ಚೆಕ್ ಗಳನ್ನು ಬಳಸಿ ಒಟ್ಟು ರೂ.81,616/-ಗಳನ್ನು ವೆಚ್ಚ ಮಾಡಿರುತ್ತಾರೆಂದು ಸದರಿ ಚೆಕ್ ಗೆ ಅಧ್ಯಕ್ಷರು ಸಹಿ ಮಾಡಿರುವುದು ಕಂಡುಬಂದಿರುತ್ತದೆಂದು ತಿಳಿಸಿರುತ್ತಾರೆ.

ಸರ್ಕಾರವು ಮುಖ್ಯ ಕಾರ್ಯನಿರ್ವಾಹಕಾಧಿಕಾರಿ, ಜಿಲ್ಲಾ ಪಂಚಾಯಿತಿ, ಮೈಸೂರು ರವರ ಪ್ರಸ್ತಾವನೆಗಳು, ಲಭ್ಯವಿರುವ ಎಲ್ಲಾ ಸಾಕ್ಷ್ಯಾಧಾರಗಳು, ದಾಖಲಾತಿಗಳು, ಲಿಖಿತ ಹೇಳಿಕೆಗಳು ಹಾಗೂ ಆಪಾದಿತ ಅಧ್ಯಕ್ಷರ ಹೇಳಿಕೆಗಳನ್ನು ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಮೈಸೂರು ಇವರ ವರದಿಯನ್ನು ಪರಿಶೀಲಿಸಿ, ಶ್ರೀಮತಿ ಜಯಮ್ಮ, ಅಧ್ಯಕ್ಷರು ಉದ್ಬೂರು ಗ್ರಾಮ ಪಂಚಾಯಿತಿ, ಮೈಸೂರು ತಾಲ್ಲೂಕು ಮತ್ತು ಜಿಲ್ಲೆ ಇವರ ಮೇಲಿನ ಆರೋಪಗಳು ಸಾಬೀತಾಗದೆ ಇರುವ ಹಿನ್ನಲೆಯಲ್ಲಿ ಶ್ರೀಮತಿ ಜಯಮ್ಮ, ಅಧ್ಯಕ್ಷರು ಉದ್ಬೂರು ಗ್ರಾಮ ಪಂಚಾಯಿತಿ, ಮೈಸೂರು ತಾಲ್ಲೂಕು ಮತ್ತು ಜಿಲ್ಲೆ ಇವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯಿದೆ 1993 ಪ್ರಕರಣ 48(4) ಮತ್ತು 43(ಎ) ರಡಿ ಜರುಗಿಸಬೇಕಾದ ಕ್ರಮವನ್ನು ಕೈಬಿಟ್ಟು ಪ್ರಕರಣವನ್ನು ಮುಕ್ತಾಯಗೊಳಿಸಲು ನಿರ್ಧರಿಸಿದೆ.

ಅದರಂತೆ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 839 ಗ್ರಾಪಂಅ 2017 ಬೆಂಗಳೂರು, ದಿನಾಂಕ:06.04.2018**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಶ್ರೀಮತಿ ಜಯಮ್ಮ, ಅಧ್ಯಕ್ಷರು ಉದ್ಬೂರು ಗ್ರಾಮ ಪಂಚಾಯಿತಿ, ಮೈಸೂರು ತಾಲ್ಲೂಕು ಮತ್ತು ಜಿಲ್ಲೆ ಇವರ ಹೇಳಿಕೆ ಹಾಗೂ ಮೌಖಿಕ ವಿಚಾರಣೆಯ

ಹಿನ್ನೆಲೆಯಲ್ಲಿ ಶ್ರೀಮತಿ ಜಯಮ್ಮ, ಅಧ್ಯಕ್ಷರು ಉದ್ಬೂರು ಗ್ರಾಮ ಪಂಚಾಯಿತಿ, ಮೈಸೂರು ತಾಲ್ಲೂಕು ಮತ್ತು ಜಿಲ್ಲೆ ಇವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯಿದೆ 1993 ಪ್ರಕರಣ 48(4) ಮತ್ತು 43(ಎ) ರಡಿ ಪ್ರಾರಂಭಿಸಲಾದ ವಿಚಾರಣೆಯನ್ನು ಕೈಬಿಟ್ಟು, ಪ್ರಕರಣವನ್ನು ಮುಕ್ತಾಯಗೊಳಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

6/4

**(ಮುಬಾರಕ್ ಅಹ್ಮದ್),**
ಉಪನಿರ್ದೇಶಕರು ಮತ್ತು ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಗೆ:

1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಮೈಸೂರು ಜಿಲ್ಲೆ. 6/4
2. ಕಾರ್ಯನಿರ್ವಾಹಕಾಧಿಕಾರಿ, ತಾಲ್ಲೂಕು ಪಂಚಾಯಿತಿ, ಮೈಸೂರು ತಾಲ್ಲೂಕು, ಮೈಸೂರು ಜಿಲ್ಲೆ.
3. ಶ್ರೀಮತಿ ಜಯಮ್ಮ ಅಧ್ಯಕ್ಷರು, ಉದ್ಬೂರು ಗ್ರಾಮ ಪಂಚಾಯಿತಿ, ಮೈಸೂರು ತಾಲ್ಲೂಕು ಮತ್ತು ಜಿಲ್ಲೆ.
4. ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಉದ್ಬೂರು ಗ್ರಾಮ ಪಂಚಾಯಿತಿ, ಮೈಸೂರು ತಾಲ್ಲೂಕು ಮತ್ತು ಜಿಲ್ಲೆ.
5. ಗಣಕ ಶಾಖೆ/ಕರ್ನಾಟಕ ವಿಕಾಸ
6. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

<u>ಪ್ರತಿಯನ್ನು ಮಾಹಿತಿಗಾಗಿ:</u>

1) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು(ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿ.